doc. 49
T.P-2

Regn No M 1229 | 43rd Year | Sri 'Satyavadi' Mysore | 7—5—1959

ಸ್ವಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸೇನೆ ನೆರವಿನ ಪ್ರಥಮ ಉಪಯೋಗ

ವಾಷಿಂಗ್ಟ್ 6 — ಸೆನೇಟಿನ ವಿದೇಶ ಸಮಿತಿಯ ಅಧ್ಯಕ್ಷರಾದ ವಿಲಿಯಂ ಫುಲ್‌ಬ್ರೈಟ್‌ರು ಪಾಕಿಸ್ತಾನಕ್ಕೆ ಅಮೇರಿಕದ ಸೇನೆ ನೆರವು ಕುರಿತು ಟೀಕಿಸಿದರು. ಪಾಕಿಸ್ತಾನಿಗಳು ಮಾಡಿದ ಮೊದಲನೆ ಕೆಲಸವೆಂದರೆ ಭಾರತದ ವಿಮಾನವನ್ನು ನೊಡಲು ಕೆಳಗುರುಳಿಸಿದುದು ಎಂದರು.

ಅಮೇರಿಕಾಕ್ಕೆ ಐಕ್

ವಾಷಿಂಗ್ಟ್ 6 — ರಷ್ಯದ ಪ್ರಧಾನಿ ನಿಕಿಟಾ ಕ್ರುಶ್ಚೇವರು ಈ ವರ್ಷ ಅಮೇರಿಕಾಕ್ಕೆ ಭೇಟಿಕೊಡುವ ಸಾಧ್ಯತೆ ಬಗ್ಗೆ ತೀವ್ರವಾಗಿ ಮಾತನಾಡುತ್ತಿದ್ದಾರೆ.

ಕಾಳ ಸಂತೆಯಲ್ಲಿ ಕನ್ನಡ ಭಾರತ

ಬೆಂಗಳೂರು 5— ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಇಲಿತಾಖೆಯಿಂದ ಪ್ರಕಟವಾದ ಕುವೆಂಪು ವ್ಯಾಖ್ಯಾನ ಭಾರತದ ಪ್ರತಿಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿತ್ತೆಂದು ವರ್ತಮಾನ ಬಂದಿದೆ. ಕಾಳಸಂತೆ ಸಂದರ್ಭಗಳು ಸಾರ್ವಜನಿಕರ ದೃಷ್ಟಿಗೆ ಬಿದ್ದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅವನ್ನು ಸರ್ಕಾರದ ಗಮನಕ್ಕೆ ತಂದೇಕೆಂದು ಕೋರಲಾಗಿದೆ.

ವೇತನ ಹೆಚ್ಚಿಸುವ ಯೋಜನೆ

ಬೊಂಬಾಯಿ 6— ಬೊಂಬಾಯಿ ಸರ್ಕಾರವು ರಾಜ್ಯದ ವಿಧಾನ ಸಭಾ ಸದಸ್ಯರ ಸಂಬಳವನ್ನು ಸುಮಾರು 150 ರಿಂದ 250 ಕ್ಕೆ ಹೆಚ್ಚಿಸಲು ಯೋಚಿಸಿದೆ.

ವಿವಿಧ ವರ್ತಮಾನ

ಈ ತಿಂಗಳು 12 ನೆಯ ತಾ|| ಮಧ್ಯಾಹ್ನ ಮೈಸೂರು ಪೌರಸಭೆಯ ಮುಂದುವರಿದ ಸಭೆ ಸೇರುವದು.

ಂ ಂ

9 ನೇ ತಾ|| ಶನಿವಾರ ಮೈಸೂರು ನಿವಾತಾಚ್ಛಾದಿನಲ್ಲಿ ಸಂಜೆ 6 ರಿಂದ 7 ರವರಿಗೆ ಇಂಗ್ಲೀಷು ಚ್ಯಾಂಡಿನ ಕಾರ್ಯಕ್ರಮ ಏರ್ಪಾಟಾಗಿದೆ.

ಂ ಂ

ರೂಪರ್ (ಅಂಬಾಲ) ಜಾಡಿ ಮತ್ತು ಗೃಹ ಕೈಗಾರಿಕೆಗಳನ್ನು ಗ್ರಾಮದರ್ತನ ಮತ್ತು ಸರ್ವೋದಯ ಮಾರ್ಗಗಳಲ್ಲಿ ಅಭಿವೃದ್ಧಿಗೊಳಿಸಬೇಕೆಂದು ಆಚಾರ್ಯ ವಿನೋಬ ಭಾವೆ ಸಲಹೆ ಮಾಡಿದರು.

ಂ ಂ

ಬೆಂಗಳೂರು 6 ಮೈಸೂರುರಾಜ್ಯದಲ್ಲಿ ಕಸಿಸ್ಯ ಒಂದಾದರೂ ದೊಡ್ಡ ಬಂದರು ಮತ್ತು ಮೂರು ಮಧ್ಯಮ ಕಂಗತಿಯನ್ನು ಬಂದರುಗಳನ್ನು ಅಭಿವೃದ್ಧಿಗೊಳಿಸಬೇಕೆಂದು ರಾಜ್ಯ ಸರಕಾರ ಒತ್ತಾಯ ಮಾಡಿದೆ.

ಂ ಂ

ನವದೆಹಲಿ 6—ಸಂಸ್ಕೃತ ಅಯೋಗದ ವಂದಿಯ ಮೇಲೆ ಇಂದು ಲೋಕಸಭೆಯಲ್ಲಿ ಚರ್ಚೆ ನಡೆದಾಗ ಸಂಸ್ಕೃತದ ಅಧ್ಯಯನಕ್ಕೆ ಇನ್ನೂ ಹೆಚ್ಚಿನ ಉತ್ತೇಜನೆ ಅಗತ್ಯವೆಂದು ಸದಸ್ಯರು ಒತ್ತಾಯ ಮಾಡಿದರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾ ದೈವಜ್ಞಶಿಖಾಮಣಿ ಸಂಪತ್ಕೃಷ್ಣಜೋಯಿಸರಿಂದ

8 ಪ್ರಥಮ ಭಾಗ

ಸಿನೀಮಾ ಪ್ರೊಜಕ್ಟರುಗಳು

ನವದೆಹಲಿ 6— ಡೆಹರಾಡೂನಿನಲ್ಲಿರುವ ಯುದ್ಧೋಪಕರಣಗಳ ಕಾರ್ಖಾನೆಯು ಈಗಾಗಲೇ 35 ಎಂ.ಎಲಿಮಾಟರು ಸಿನೀಮಾ ಪ್ರೊಜೆಕ್ಟರುಗಳ ತಯಾರಿಕೆಯನ್ನು ಕೈಗೊಂಡಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಮರ ಉರುಳಿ ನಾಲು ಜನರ ಮರಣ

ಬೆಳಗಾಂ 6— ಇಲ್ಲಿಗೆ ಏಳು ಮೈಲಿ ದೂರದಲ್ಲಿರುವ ಎಲ್ಲೂರು ಗ್ರಾಮದಲ್ಲಿ ಒಂದು ಮರಕ್ಕೆ ಸಿಡಲು ಬಡಿದು ಅದು ಬಿದ್ದಾಗ ಅದಂ ಕೆಳಗೆ ನಿಂತಿದ್ದ ಇಬ್ಬರು ಗಂಡಸರೂ ಒಬ್ಬ ಹೆಂಗಸೂ ಮತ್ತು ಅಲ್ಲೇ ಹತ್ತಿರ ಹೋಗುತ್ತಿದ್ದ ಒಬ್ಬ ರೈತನೂ ಗತಪ್ರಾಣರಾದರು.

ಕೊನೆಯ ತೀರ್ಮಾನವಿಲ್ಲ

ನವ ದೆಹಲಿ 6 — ಒರಿಸ್ಸಾದಲ್ಲಿ ಕಾಂಗ್ರೆಸು-ಗಣತಂತ್ರ ಪರಿಷತ್ತಿನ ಸಮ್ಮಿಶ್ರ ಮಂತ್ರಿಮಂಡಲ ರಚನೆ ಕುರಿತು ಕಡೆಯ ತೀರ್ಮಾನವನ್ನು ಗಣತಂತ್ರ ಪರಿಷತ್ತಿನ ಪಾರ್ಲಿಮೆಂಟರಿ ಸಮಿತಿ ಮುಂದುವರಿಸಿದೆ ಕಾಂಗ್ರೆಸು ಹೈಕಮಾಂಡಿನ ತೀರ್ಮಾನಕ್ಕೆ ಕಾದು ಈ ರೀತಿ ಮಾಡಿದೆ.

ಅಲ್ಪ ಸಂಖ್ಯಾತರಿಗೆ ಸಂತೋಷ !

ಕರಾಚಿ 6 — ಪಾಕಿಸ್ತಾನದ ಪ್ರಸಾರ ಮಂತ್ರಿ ಹಬೀಬುರ್ ರೆಹಮಾನರು ಈ ದಿನ ಹೇಳಿಕೆಯಿತ್ತು, ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾತರು ಸಂತೋಷ ಮತ್ತು ತೃಪ್ತಿಯಿಂದ ಇರುವರು ಎಂಬುದಾಗಿ ತಿಳಿಸಿದರು.

ನವ ದೆಹಲಿ 6 — ಭಾರತ ವಿಮಾನದಳದ ಕ್ಯಾನ್ಬೆರಾವನ್ನು ಪಾಕಿಸ್ತಾನವು ಹೊಡೆದುರುಳಿಸಿದ್ದು ಅಂತರಾಷ್ಟ್ರೀಯ ನಡವಳಿಕೆಗೆ ಸಂಪೂರ್ಣ ವಿರುದ್ಧವೆಂದು ಭಾರತ ಪ್ರತಿಭಟಿಸಿ, ಪೂರ್ಣ ಪರಿಹಾರ ಕೇಳಿದೆ.

ಪ್ಯಾರಿ 6 — ಕ್ವೆಮಾಯ್ ಮೇಲೆ ಪೀಕಿಂಗು ಧಾಳಿ ಮಾಡಿಲು ಆರಂಭಿಸಬಹುದೆಂದು, ಅಮೇರಿಕಾ-ಫಾರ್ಮೋಸ ಇದನ್ನು ಪ್ರತಿಭಟಿಸಬಹುದೆಂದು ವರದಿ

ಟಿಬೆಟ್ ಬಗ್ಗೆ ಸಮ್ಮೇಳನ

ಕಲ್ಕತ್ತಾ 6 — ಈ ಮಾಹೆ 30, 31 ರಲ್ಲಿ ಶ್ರೀ ಜಯಪ್ರಕಾಶನಾರಾಯಣರವರ ಅಧ್ಯಕ್ಷತೆಯಲ್ಲಿ ಟಿಬೆಟ್ ಬಗ್ಗೆ ಅಖಿಲ ಭಾರತ ಸಮ್ಮೇಳನ ನಡೆಯುವದು.

— × —

ಕ್ವಿಲಾರ್ 4 — ಕ್ರಾಂತಿಕಾರಿ ಸಮಾಜವಾದಿ ಪಕ್ಷದ ಮೆಂವಣಿಗೆ ನಡೆಯುತ್ತಿದ್ದಾಗ ಮಧ್ಯೆ ಲಾರಿಯೊಂದ ಬಂದು 35 ವರ್ಷದ ಕಾರ್ಮಿಕನೋರ್ವ ಸಿಕ್ಕಿ ಸತ್ತನು

ಮಧ್ಯಪ್ರದೇಶದ ಪೂರ್ವ ಮತ್ತು ಪಶ್ಚಿಮ ನಿಮ್ಮಾರ್ ಜಿಲ್ಲೆಯ ಆದಿವಾಸಿ ಜನಂ ಶಿಕ್ಷಣ ಪಡೆದ ಮುಕ್ಕಳು ದೇಶಿಯ ಮದ್ಯ ಸೇವನೆ ವಿರುದ್ಧ ಪ್ರಚಾರ ಮಾಡುತ್ತಿದ್ದಾರೆ.

ಮಧುರಾ 6 — ಇಲ್ಲಿಗೆ 50 ಮೈಲಿಗಳ ದೂರದ ದೇಪದಾನಪಟ್ಟಿಯಲ್ಲಿ ಲಾರಿ ಅಪಘಾತದಿಂದ ನಾಲ್ವರು ಮಹಿಳೆಯರು ಸತ್ತರು

ಕಳೆದ ಭಾನುವಾರ ಗಯಾದಲ್ಲಿ ಸೂರ್ಯತಾಪದಿಂದ 4 ಜನರು ಮರಣಹೊಂದಿದರು

ಕೊಯಮ್ಮತ್ತೂರು 5 — ಅಧಿಕ ಆಹಾರೋತ್ಪಾದನೆ ಆದರೆ ದೇಶದ ಬಡತನ ಅಳಿಯುವದೆಂದು ಮದ್ರಾಸಿನ ಅರ್ಥ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ತಿಳಿಸಿದ್ದಾರೆ.

ನವ ದೆಹಲಿ 6 — 10 ಸಾವಿರ ಟಿಬೆಟನ ನಿರಾಶ್ರಿತರು ಭಾರತಕ್ಕೆ ಆಗಮಿಸಿದ್ದಾರೆ.

ಭೀಕರ ಬೆಂಕಿ ಅನಾಹುತ

ಬೆಳಗಾವಿಸೆ ಹೋಂಧಳೀ ಗಲ್ಲಿಯಲ್ಲಿರುವ ಶ್ರೀ ಬೆಳಿಯವರ ಚೌಕದಲ್ಲಿ ಕ್ಕಿಯು ಒಂದು ಮನೆಗೆ ಕಳೆದ ಶುಕ್ರವಾರ ಸಂಜೆ ಸುಮಾರು 7 ಗಂಟೆಗೆ ಅಕಸ್ಮಾ ಶು ಬೆಂಕಿ ಹತ್ತಿ ಒಂದು ಮನೆಯು ಪೂರ್ಣ ಸುಟ್ಟಿದ್ದು, ನೆರೆಯ ಮನೆಯ ಕೆಲವು ಭಾಗವೂ ಸುಟ್ಟಿರುವುದು ; ಈ ವಾರ್ತೆ ತಿಳಿದ ಕೂಡಲೇ ನಗರ ಸಭೆಯ ಮತ್ತು ಕಂಟೋನ್ಮೆಂಟಿನ ನೀರಿನ ಮೋಟಾರುಗಳು ಬಂದು ಬೆಂಕಿಯನ್ನು ನೊಂದಿಸಿದವು ; ಸದರಿ ಮನೆಯಲ್ಲಿ ಇಲ್ಲಿಯ ಭಡಕಲ್ಲುಗಲ್ಲಿಯ ಶಾಲೆಯಲ್ಲಿಯ ಹೆಡ್‌ಮಿಸ್ಟ್ರೆಸ್ ಕಂಡಿ ಅವರು ಇದ್ದರು ; ಇವರ ಮಗಳ ಮದುವೆಯು ಇಂದೇ ಆಗುವದಿತ್ತು ; ಮದುಮಗನನ್ನು ಮನೆಯ ಅಳಿಯನನ್ನೇ ಮಾಡಿಕೆಕೊಳ್ಳುವರಿದ್ದರು ; ಸದರಿ ಬೆಂಕಿಯಲ್ಲಿ ಸುಮಾರು ಐದು ಸಾವಿರ ಬೆಲೆಯ ದಾಗಿನೇಗಳು ಕರಗಿ ಮುದ್ದೆ ಯಾಗಿದ್ದು, ಮದುವೆಗಾಗಿ ಬಂದವರ ಹೊಸ ಬಟ್ಟೆಗಳೆಲ್ಲವೂ ಸುಟ್ಟುಹೋಗಿರು ವುದೆಂದು ಹೇಳಲಾಗುತ್ತಿದೆ : ವಿದ್ಯುತ್ತಿನ ತಂತಿಯಿಂದ ಬೆಂಕಿ ಹತ್ತಿತೆಂದು ಜನರು ಮಾತಾಡುತ್ತಿದ್ದರು.

ತುಂಗಭದ್ರಾ ನಾಲಾ ಯೋಜನೆ

ನವದೆಹಲಿ 6— ತುಂಗಭದ್ರಾ ಉನ್ನತ ಮಟ್ಟದ ನಾಲಾ ಕಾಮ್ರ್ ಯೋಜನೆಗಾಗಿ ಆಂಧ್ರ ಪ್ರದೇಶ ಸರಕಾರದವರ ವಿವಿಧ ಘಟ್ಟಗಳ ಕಾರ್ಯಕ್ರಮವನ್ನು ಸೂಚಿಸಿದ್ದಾರೆಂದೂ, ಈ ಕಾರ್ಯಕ್ರಮದಲ್ಲಿ ಮೈಸೂರು ಸರಕಾರದವರು ತಮ್ಮ ವಾಲಿನ ಹಣವನ್ನು ಒದಗಿಸುವಳೆಂದು ನಿರೀಕ್ಷಿಸಲಾಗಿದೆಯೆಂದೂ, ಈ ಕಾರ್ಯ ಯೋಜನೆಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು 95 ಲಕ್ಷ ರೂಗಳನ್ನೂ ಆಂಧ್ರ ಪ್ರದೇಶವು 300 ಲಕ್ಷ ರೂಗಳನ್ನೂ ಒದಗಿಸಲಾಗುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ಒಂಟೇ ಸವಾರ ಸೈನ್ಯ

ಇತ್ತೀಚೆಗೆ ಬಿಕಾನೇರಿನಲ್ಲಿ ' ದಂತೋಲ್ ದಿನ ' ವನ್ನು ಆಚರಿಸಲಾಯಿತು ; ಭೂ ಸೇನೆಯ ಏಕೈಕ ಒಂಟೇ ಸವಾರ ಸೈನ್ಯವಾದ ಗಂಗಾ ಜೈಪಲ್ಟರ್ ರಿಸಾಲಾದ ಸೈನಿಕರು 1903 ರಲ್ಲಿ ಸೋಮಾಲಿಲಾಂಡಿನ ಧಂತೋಲ್ಟ್‌ಲ್ಲಿದಲ್ಲಿ ನಡೆದ ಭೀಕರ ಯುದ್ಧದಲ್ಲಿ ಭಾಗವಹಿಸಿದ ಸ್ಮರಣಾರ್ಥವಾಗಿ ಈ ವರ್ಷ 56 ನೇ ವಾರ್ಷಿಕೋತ್ಸವಕ್ಕೆ ಈ ದಿನಾಚರಣೆಯು ಸಂಬಂಧ ಪಡುತ್ತದೆ. — ದೇಶದ ಸ್ವಾತಂತ್ರ್ಯದ ನಂತರ ಒಂಟೆ ಸವಾರ ಸೈನ್ಯದವರು ಥಾರ್ ಮರು ಭೂ ಮಿ ಮತ್ತು ಕಚ್ ಪ್ರದೇಶದಲ್ಲಿ 600 ಮೈಲಿಗಳ ಉದ್ದದ ಗಡಿಯನ್ನು ರಕ್ಷಿಸುವ ಜವಾಬ್ದಾರಿ ಹೊತ್ತಿರುವರು.

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
Contract above 100 inches	1-00
500	0-75

Columa length 12½ inches ; width 2 inches; 4 columns to a page.

The decision of the management is final in all matters.

Manager " Satyavadi ", Chamarajpuram, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಆ ಶೋ ಕಾ ಫಾ ರ್ಮ ಸಿ

ಅಶ್ವಾನ್ಸ್‌ಡೌನ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

ವುಡ್‌ಲಾಂಡ್

Crowded 5 th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡ ಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

ಅಪೆರಾ— 3—5—59 ರಿಂದ

ಪಿಳ್ಳೈಕನಿಯಮುದು ತಮಿಳು

ನಟವರ್ಗ— ರಾಜೇಂದ್ರನ್, ವೀರಪ್ಪ, ಇ ವಿ ಸರೋಜ, ಎಂ ಎನ್ ರಾಜಂ, ಮುತ್ತುಲಕ್ಷ್ಮಿ, ಅಂಗಮುತ್ತು

ಪ್ರತಿದಿನ 3 ಆಟಗಳು



ಆಕಾಂಕ್ಷ ಪ್ಯಾಡಿನ ಮೇಲೆ ಆಟ್ಟಾಕ್ಷ ಕ್ಲೈವ್

Edited, Printed & Published by Dharma Prachara Nivas M Krishna Rao, at the Satyavadi Press Chamarajapuram, Mysor